ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ ಮಲ್ಲೇಶ್ವರಂ, ಬೆಂಗಳೂರು-560003

ಸಂಖ್ಯೆ: ಪಿ1/ವಿಸಪ/ಅ.ಸೂ/28/2020 ದಿನಾಂಕ:22-10-2020

**ತುರ್ತಾಗಿ ಮತ್ತು ಕಡ್ಡಾಯವಾಗಿ ಪರಿಶೀಲಿಸುವುದು.**

## -: ಸುತ್ತೋಲೆ :-

**ವಿಷಯ:** ನವೆಂಬರ್-2020 ರ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗೆ ಹಾಜರಾಗುತ್ತಿರುವ ಅಭ್ಯರ್ಥಿಗಳ ಕರಡು ಪ್ರವೇಶ ಪತ್ರ ಬಿಡುಗಡೆ ಮತ್ತು ಪರಿಶೀಲನೆ ಮಾಡುವ ಬಗ್ಗೆ.

********

ನವೆಂಬರ್-2020ರ ಮಾಹೆಯ ವಿಶೇಷ ಸಂಗೀತ ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಮಂಡಳಿಯ ಜಾಲತಾಣದಲ್ಲಿ ದಿನಾಂಕ: 23.10.2020ರಂದು ಅಪ್‌ಲೋಡ್ ಮಾಡಲಾಗುವುದು. ಅಭ್ಯರ್ಥಿಗೆ ಸಂಬಂಧಿಸಿದ ಪ್ರವೇಶ ಪತ್ರಗಳನ್ನು ಮಂಡಳಿಯ www.kseeb.kar.nic.in ಜಾಲತಾಣದ ಮೂಲಕ ನೇರವಾಗಿ ಅಭ್ಯರ್ಥಿಗಳೇ ಪ್ರವೇಶ ಪತ್ರಗಳನ್ನು ಪರಿಶೀಲಿಸಿ ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

1. ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಹೆಸರು, ತಂದೆ/ತಾಯಿ ಹೆಸರು, ವಿಳಾಸ, ಜನ್ಮದಿನಾಂಕ ಗಳಲ್ಲಿ ಅರ್ಜಿ ದಾಖಲಿಸುವ ಸಂದರ್ಭಗಳಲ್ಲಿ ತಪ್ಪಾಗಿ ನಮೂದು ಮಾಡಿದ್ದಲ್ಲಿ ಅಂತಹ ಪ್ರಕರಣದಲ್ಲಿ ಮಾತ್ರ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ನಿಮ್ಮ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಸಂಪರ್ಕಿಸಿ ತಿದ್ದುಪಡಿ ಮಾಡಲು ಅವಕಾಶ ನೀಡಿದೆ.
2. ಯಾವುದೇ ವಿಷಯಗಳ ಜೂನಿಯರ್ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಾತ್ರ ಪ್ರವೇಶ ಪತ್ರಗಳಲ್ಲಿನ ತಿದ್ದುಪಡಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.
3. ಯಾವುದೇ ವಿಷಯಗಳ ಸೀನಿಯರ್, ವಿದ್ವತ್ ಪೂರ್ವ, ವಿದ್ವತ್ ಅಂತಿಮ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಾತ್ರ ತಮ್ಮ ಪ್ರವೇಶ ಪತ್ರದಲ್ಲಿನ ಹೆಸರು, ತಂದೆ/ತಾಯಿ ಹೆಸರು, ವಿಳಾಸ, ಜನ್ಮದಿನಾಂಕಗಳಲ್ಲಿ ತಿದ್ದುಪಡಿ ಮಾಡಲು ಸಾಧ್ಯವಾಗುವುದಿಲ್ಲ. ಅದರೆ ಅಭ್ಯರ್ಥಿಯ ಭಾವಚಿತ್ರ ಸಹಿ ಹಾಗೂ ಮೊಬೈಲ್ ಸಂಖ್ಯೆಯನ್ನು ತಿದ್ದುಪಡಿ ಮಾಡಬಹುದಾಗಿದೆ.
4. ಪ್ರವೇಶ ಪತ್ರಗಳಲ್ಲಿ ಮತ್ತು ಕೇಂದ್ರದ ನಾಮಪಟ್ಟಿಯಲ್ಲಿ ಭಾವಚಿತ್ರ ಮತ್ತು ಸಹಿ ಹೊಂದಿರದ ಯಾವುದೇ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಲಾಗುವುದಿಲ್ಲ. ಇದರಿಂದ ವಿದ್ಯಾರ್ಥಿಗೆ ಆಗುವ ತೊಂದರೆಗೆ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ಅಭ್ಯರ್ಥಿಗಳೇ ನೇರ ಹೊಣೆಗಾರರು ಆಗಿರುತ್ತೀರಿ. ಇಂತಹ ಪ್ರಕರಣಗಳಿಗೆ ಮಂಡಳಿಯು ಜವಾಬ್ದಾರಿ ಹೊರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.
5. ಒಂದು ವೇಳೆ ಭಾವ ಚಿತ್ರ ಮತ್ತು ಸಹಿ ಇಲ್ಲದ ಪ್ರವೇಶ ಪತ್ರ ಸ್ವೀಕರಿಸಿದಲ್ಲಿ ತುರ್ತಾಗಿ ನಿಮ್ಮ ಕೇಂದ್ರದ ಮುಖ್ಯ ಅಧೀಕ್ಷಕರುಗಳನ್ನು ಸಂಪರ್ಕಿಸಿ Upload ಮಾಡಿಸಿಕೊಳ್ಳಲು ತಿಳಿಸಿದೆ.
6. ಪ್ರವೇಶ ಪತ್ರಗಳಲ್ಲಿ ನೀಡಲಾಗಿರುವ ಸಾಮನ್ಯ ಸೂಚನೆಗಳು ಮತ್ತು ಕೋವಿಡ್-19ರ ಸಂಬಂಧದ ಮುಂಜಾಗ್ರತೆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
7. ಯಾವುದೇ ಅಭ್ಯರ್ಥಿಯ **ವಿಷಯ ಬದಲಾವಣೆ** ಮತ್ತು **ಕೇಂದ್ರಗಳ ಬದಲಾವಣೆಗೆ** ಅವಕಾಶ ಇರುವುದಿಲ್ಲ ಎಂಬುದನ್ನು ಮೊತ್ತಮ್ಮೆ ಸ್ಪಷ್ಟಪಡಿಸಿದೆ.
8. ಅಭ್ಯರ್ಥಿಗಳು ಮತ್ತು ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳ ಮಾಹಿತಿಗಾಗಿ ಪ್ರವೇಶ ಪತ್ರ ಡೌನಲೋಡ್ ಮಾಡುವುದರ ಕುರಿತಾದ **Flowchart** ಸಿದ್ದಪಡಿಸಿ ಮಂಡಳಿಯ ಜಾಲತಾಣದಲ್ಲಿ (Website)ಅಳವಡಿಸಿದೆ.
9. ಪ್ರವೇಶ ಪತ್ರದಲ್ಲಿನ ತಿದ್ದುಪಡಿ ಮಾಡಿಸಿಕೊಳ್ಳಲು **ದಿನಾಂಕ:03.11.2020ರಂದು** ಅಂತಿಮ ದಿನಾಂಕವಾಗಿರುತ್ತದೆ. ತಿದ್ದುಪಡಿಗಾಗಿ ಯಾವುದೇ ಹೆಚ್ಚುವರಿ ಶುಲ್ಕ ಭರಿಸುವ ಅಗತ್ಯತೆ ಇರುವುದಿಲ್ಲ.

10. ಪರೀಕ್ಷಾ ಸಮಯದಲ್ಲಿ ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ತಿಳಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಸಂಗೀತ ವಿಭಾಗ, 4ನೇ ಮಹಡಿ ಕ.ಪ್ರೌ.ಶಿ.ಪ.ಮಂಡಳಿ, 6ನೇ ಅಡ್ಡರಸ್ತೆ ಮಲ್ಲೇಶ್ವರಂ, ಬೆಂಗಳೂರು–560003. ಮೊಬೈಲ್ ಸಂಖ್ಯೆ: 6363822574 ಮಂಡಳಿಯ ದೂರವಾಣಿ ಸಂಖ್ಯೆ 080–23360109 ಗಳಿಗೆ ಬೆಳಗ್ಗೆ 10–00 ರಿಂದ 5.30 ರವರೆಗೆ ಕಛೇರಿ ಅವಧಿಯಲ್ಲಿ ಸಂಪರ್ಕಿಸುವುದು.

(ಎಂ.ಎಸ್. ಪ್ರಸನ್ನಕುಮಾರ್)
ನಿರ್ದೇಶಕರು,
(ಇತರೆ ಪರೀಕ್ಷೆಗಳು)

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಾಂಶುಪಾಲರು, ಡಯಟ್, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ ಮತ್ತು ತಮ್ಮ ಕಛೇರಿಯ ಸಂಗೀತ ಪರೀಕ್ಷೆಯ ನೋಡಲ್ ಅಧಿಕಾರಿಗಳಿಗೆ ಕೇಂದ್ರಗಳ ಮೇಲ್ವಿಚಾರಣೆ ಮಾಡಿ ಸೂಕ್ತ ನಿರ್ದೇಶನ ನೀಡಲು ಸೂಚಿಸುವುದು.
2. ರಾಜ್ಯದ ಎಲ್ಲಾ ಜಿಲ್ಲೆಗಳ ಸಂಗೀತ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಗಣಕ ಶಾಖೆ, ಇತರೆ ಪರೀಕ್ಷೆಗಳ, ಇವರಿಗೆ ಕಳುಹಿಸುತ್ತಾ ನಿಗದಿಪಡಿಸಿದ ದಿನಾಂಕದಂದು ಮಂಡಳಿಯ ಜಾಲತಾಣದಲ್ಲಿ ಕರಡು ಪ್ರವೇಶ ಪತ್ರ ಬಿಡುಗಡೆಗೆ ಅಗತ್ಯ ಕ್ರಮವಹಿಸುವುದು.
4. ಕಛೇರಿ ಪ್ರತಿ.